

# ಹೂವಿನ ಬಣ್ಣ!



ಚಿತ್ರಗಳು: ದಿಲೀಪ್ ಬ್ಯಾನರ್ಜಿ

ಎಷ್ಟೊಂದು ಬಣ್ಣಗಳು! ಮುಟ್ಟಿದರೆ ಮದುಡುವ, ರೇಷಿಮೆಯ ಎಳೆಯಂತಹ ನವಿರು ಹೂವಿನ ಪಕಳೆಗಳು. ಈ ಬಣ್ಣ ಬಳಿದವರ್‍ಯಾರು? ಒಂದೇ ಹೂವಿನಲ್ಲಿ ಏಳೆಂಟು ಬಣ್ಣಗಳು. ಒಂದೇ ಬಣ್ಣದಲ್ಲಿ ಏಳೆಂಟು ನೆರಳುಗಳು! ಹೂವಿನ ಲೋಕವನ್ನು, ಅದರ ಬಣ್ಣಗಳ ಸಂಭ್ರಮವನ್ನು ಹತ್ತಿರದಿಂದ ನೋಡಿದಾಗ ನಿಜಕ್ಕೂ ಮನಸ್ಸು ದಿಗ್ಭ್ರಮೆಗೊಳ್ಳುತ್ತದೆ.



ಇಲ್ಲಿರುವ ಹೂವುಗಳನ್ನೇ ನೋಡಿ. ಕೆಂಪಿನಲ್ಲೂ ಎಷ್ಟೊಂದು ಭಿನ್ನತೆಗಳಿವೆ! ನೀಲಿಯಲ್ಲೂ ಎಷ್ಟೊಂದು ಮಿಶ್ರಣಗಳಿವೆ? ಹೋಗಲಿ, ಬಿಳೀ ಹೂವು ಎನ್ನೋಣವೆ.. ಎಂದರೆ ಆ ಬಿಳಿಯಲ್ಲೂ ಸ್ವಲ್ಪ ಮಂಕು, ಸ್ವಲ್ಪ ಕೊಂಕು! ಬೆಳ್ಳಗೆ ಅರಳಿದ ಹೂವಿನ ಪಕಳೆಗಳ ಮೇಲೆ ಕೆಂಪು ಬಣ್ಣ ಸುರಿದವರ್‍ಯಾರು..? ಅದರ ಪಕ್ಕದಲ್ಲೇ ಆ ಕೆಂಪು ಹೋಗಿ ನೇರಳೆ ಮಿಶ್ರಣವಾದದ್ದು ಹೇಗೆ? ಪುಟ್ಟ ನೇರಳೆ ಹೂವಿನ ಮಧ್ಯಭಾಗಕ್ಕೆ ಪಟ್ಟಿ ಹಿಡಿದು ಲೆಕ್ಕ ಹಾಕಿದಂತೆ ನೇರಳೆ ಬಣ್ಣ ಹಚ್ಚಿದವರ್‍ಯಾರು? ಮಡಚಿದ ಎಲೆಯಂತಿರುವ ಪಕಳೆಗಳಿಗೆ ಬ್ರಶ್ ಹಿಡಿದು ಲೆಕ್ಕಾಚಾರದಿಂದ ಕೆಂಪು ಹಚ್ಚಿದ್ದಾದರೂ ಹೇಗೆ!?

ಹೂವು ಪ್ರಕೃತಿಯ ಅದ್ಭುತ! ಬಣ್ಣಗಳನ್ನು ವೀಕ್ಷಿಸುವ ನಮ್ಮ ಕಣ್ಣಿನ ಸಾಮರ್ಥ್ಯ ಹೇಗೆ ಅದ್ಭುತವೋ, ಹಾಗೆಯೇ ಈ ಅರಳಿದ ಹೂಗಳು ಬಚ್ಚಿಟ್ಟ, ಬಿಚ್ಚಿಟ್ಟ ಬಣ್ಣಗಳೂ ಅದ್ಭುತ. ಯಾವ ಕಲಾವಿದ ಎಷ್ಟೇ ಕಾಪಿ ಹೊಡೆದರೂ ಈ ಬಣ್ಣಗಳ ತಾಜಾತನ ಒಗ್ಗುವುದಿಲ್ಲ. ಏಕೆಂದರೆ ಇಲ್ಲಿ ಹೂವುಗಳಲ್ಲಿ ಜೀವವಿದೆ.

